**ಓ.ಎಸ್. ನಂ. 74/2020** **ಪಿ.ಡಬ್ಲ್ಯೂ- 3**

**ಸಾಕ್ಷಿಯನ್ನು ದಿನಾಂಕ 8.9.2023 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

ಪಾಟೀ ಸವಾಲುಃ 4 ರಿಂದ 6, 9 ರಿಂದ 11 ನೇ ಪ್ರತಿವಾದಿ ಪರ ಶ್ರೀ ಡಿ.ಆರ್.ಎಂ ವಕೀಲರಿಂದಃ

ನನಗೆ ಸಾಕ್ಷಿ ನುಡಿಯಲು ನ್ಯಾಯಾಲಯದಿಂದ ಸಮನ್ಸ ಬಂದಿರುವುದಿಲ್ಲ, ನನ್ನನ್ನು ವಾದಿಯರು ಸಾಕ್ಷಿ ನುಡಿಯಲು ಕರೆದಿರುತ್ತಾರೆ. ನನಗೆ ಕಟ್ಟೆಹುಂಡಿ ಗ್ರಾಮದಲ್ಲಿ ಜಮೀನು ಇರುವುದಿಲ್ಲ, ನನಗೆ ಮೈಸೂರು ತಾಲ್ಲೂಕಿನ ಡಿ.ಎಂ.ಹಳ್ಳಿಯಲ್ಲಿ ಜಮೀನು ಇರುತ್ತದೆ. ನನಗೆ ಕಟ್ಟೆಹುಂಡಿ ಗ್ರಾಮದ ಸರ್ವೆ ನಂಬರುಗಳ ಪೈಕಿ ಪಕ್ಕದಲ್ಲಿ ಜಮೀನು ಇರುತ್ತದೆ, ಸರ್ವೆ ನಂಬರ್ ಗೊತ್ತಿರುವುದಿಲ್ಲ. ದಾವಆಸ್ತಿಗಳ ಸರ್ವೆ ನಂಬರ್ ನನಗೆ ಗೊತ್ತಿರುವುದಿಲ್ಲ. ನಾನು ವಾಸವಾಗಿರುವ ಸ್ಥಳಕ್ಕೂ ವಾದಿಯರು ವಾಸವಾಗಿರುವ ಸ್ಥಳಕ್ಕೂ 1 ಕಿ.ಮೀ ಅಂತರವಿರುತ್ತದೆ. ತಿರುಮಲೇಗೌಡರಿಗೆ ಯಾವ ಸರ್ವೆ ನಂಬರಿನಲ್ಲಿ ಎಷ್ಟು ಜಮೀನು ಇತ್ತು ಎಂದು ನನಗೆ ಗೊತ್ತಿರುವುದಿಲ್ಲ. ಅವರು ಜೀವಂತವಿದ್ದಾಗ ಯಾವ ಜಮೀನುಗಳನ್ನು ಮಾರಾಟ ಮಾಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ದಾವಆಸ್ತಿಗಳ ಪಕ್ಕದಲ್ಲಿ ನನಗೆ ಸಂಬಂಧಪಟ್ಟ ಜಮೀನು ಇರುವುದಿಲ್ಲ. ಸಾಕ್ಷಿದಾರರು ಮುಂದುವರಿದು ತಿರುಮಲೇಗೌಡರ ಜಮೀನಿನ ಪಕ್ಕದಲ್ಲಿ ನಮ್ಮ ಊರಿಗೆ ಹೋಗುವ ರಸ್ತೆ ಇದ್ದು, ಸದರಿ ರಸ್ತೆಯಲ್ಲಿ ಓಡಾಡುತ್ತೇನೆ ಎನ್ನುವರು. ನನಗೆ 1 ರಿಂದ 3 ನೇ ಪ್ರತಿವಾದಿಯರ ಪರಿಚಯ ಇರುತ್ತದೆ. ನಾನು ಮತ್ತು 1 ರಿಂದ 3 ನೇ ಪ್ರತಿವಾದಿಯರು ವಿಶ್ವಾಸದಿಂದ ಇರುತ್ತೇವೆ ಎಂದರೆ ಸರಿ. ನಾನು ವಾದಿಯರ ಮಾತು ಕೇಳಿ ದಾವಆಸ್ತಿಯ ಪಕ್ಕದಲ್ಲಿ ನನಗೆ ಯಾವುದೇ ಜಮೀನು ಇರದಿದ್ದರೂ ಸಹ ವಾದಿಯರು ಸ್ವಾಧೀನ ಇರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಸಂಬಂಧಪಟ್ಟಂತೆ ಯಾವುದೇ ಜಮೀನು ಇರುವುದಿಲ್ಲ ಎಂದರೆ ಸಾಕ್ಷಿದಾರರು ದಾವಆಸ್ತಿಯ ಹತ್ತಿರ ಇರುವುದಿಲ್ಲ ಎನ್ನುವರು. ನನಗೆ ನ್ಯಾಯಾಲಯದಲ್ಲಿ ಬೇರೆಯವರು ಸಾಕ್ಷಿ ಹೇಳಲು ಕರೆಯುತ್ತಾರೆ ಎಂದರೆ ಸರಿಯಲ್ಲ. ನಾನು ಕರೆದವರಿಗೆಲ್ಲಾ ನ್ಯಾಯಾಲಯಕ್ಕೆ ಹೋಗಿ ಸುಳ್ಳು ಸಾಕ್ಷಿ ಹೇಳುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.